**ದಿನಾಂಕ: 06-03-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 4ನೇ ಎದುರುದಾರರ ಪರ ಶ್ರೀ ವಿ.ಸಿ.ಎಂ.ಪಿ. ವಕೀಲರಿಂದ**

1. ಮೃತ ಶಾಂತಯ್ಯ ನನ್ನ ಗಂಡನಾಗಬೇಕು. ನಮ್ಮ ಊರು ಯಾದಗಿರಿ ಇರುತ್ತದೆ. ಗುಲ್ಬರ್ಗಾದಲ್ಲಿ ವಾಸ ಮಾಡುತ್ತಿದ್ದೀರಿ ಎಂದು ತೋರಿಸಲು ಏನಾದರೂ ದಾಖಲೆ ಇದೆಯಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನನ್ನ ಗಂಡ ಯಾದಗಿರಿಯ ಡಿ.ಸಿ. ಕಚೇರಿಯಲ್ಲಿ ಎಫ್.ಡಿ.ಎ. ಆಗಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ಯಾದಗಿರಿಯ ಡಿ.ಸಿ. ಕಚೇರಿಯಲ್ಲಿ ಎಫ್.ಡಿ.ಎ. ಆಗಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ಸ್ಯಾಲರಿ ಸ್ಲಿಪ್ ಹಾಕಿರುತ್ತೇನೆ. ಸ್ಯಾಲರಿ ಸ್ಲಿಪ್ ಬಿಟ್ಟು ಬೇರೆ ದಾಖಲಾತಿಯನ್ನು ಏನಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. 15 ವರ್ಷಗಳಿಂದ ನನ್ನ ಗಂಡ ಯಾದಗಿರಿಯ ಡಿ.ಸಿ. ಕಚೇರಿಯಲ್ಲಿ ಎಫ್.ಡಿ.ಎ. ಆಗಿ ಕೆಲಸ ಮಾಡುತ್ತಿದ್ದರು. ನಿಮ್ಮ ಗಂಡನಿಗೆ ಎಷ್ಟು ಸಂಬಳ ಇತ್ತು ಎಂದರೆ ಎಲ್ಲಾ ಸೇರಿಸಿ 51 ಸಾವಿರ ರೂಪಾಯಿ ಇತ್ತು. ನಿಮ್ಮ ಗಂಡನಿಗೆ ಸಂಬಂಧಪಟ್ಟ ಎಸ್.ಆರ್. ರಿಜಿಸ್ಟರ್ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ.

2. ನನ್ನ ಗಂಡನ 3 ತಿಂಗಳ ಸ್ಯಾಲರಿ ಸ್ಲಿಪ್ ನ್ನು ಹಾಜರುಪಡಿಸಿರುತ್ತೇನೆ. ವಿಷಯ ಗೊತ್ತಾಗುತ್ತದೆ ಎಂದು ನಿಮ್ಮ ಗಂಡನ ಎಸ್.ಆರ್. ರಿಜಿಸ್ಟರ್ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸ್ಯಾಲರಿ ಸ್ಲಿಪ್ ನ್ನು ಈ ಕೇಸಿಗಾಗಿ ಸೃಷ್ಠಿ ಮಾಡಿ ಹಾಜರುಮಾಡಿರುತ್ತೀರಿ ಎಂದರೆ ಸರಿಯಲ್ಲ. ಅಪಘಾತವಾದಾಗ ನನ್ನ ಗಂಡನ ವಯಸ್ಸು 36 ವರ್ಷ ಇತ್ತು. ನಿಮ್ಮ ಗಂಡನ ಪ್ಯಾನ್ ಕಾರ್ಡ್‌ನ್ನು ಹಾಜರುಪಡಿಸಿದ್ದೀರಾ ಎಂದರೆ ನಮ್ಮ ವಕೀಲರಿಗೆ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ಗಂಡನಿಗೆ 36 ವರ್ಷ ವಯಸ್ಸು ಇತ್ತು ತೋರಿಸಲು ಯಾವ ದಾಖಲಾತಿ ಹಾಜರುಪಡಿಸಿದ್ದೀರಿ ಎಂದರೆ ಸ್ಯಾಲರಿ ಸ್ಲಿಪ್ ನಲ್ಲಿ ವಯಸ್ಸು ಇದೆ ಎಂದು ಉತ್ತರಿಸುತ್ತಾರೆ.

3. ನನ್ನ ರೇಷನ್ ಕಾರ್ಡ್ ಇರುತ್ತದೆ ಆದರೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಮ್ಮ ಅರ್ಜಿಯಲ್ಲಿ ನಿಮ್ಮ ಗಂಡನಿಗೆ 65 ಸಾವಿರ ಸಂಬಳ ಇದೆ ಎಂದು ಸುಳ್ಳು ಹೇಳಿ ಬರೆಸಿದ್ದೀರಿ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನಿಮ್ಮ ಗಂಡನಿಗೆ 36 ವರ್ಷ ವಯಸ್ಸು ಇರಲಿಲ್ಲ ಹೆಚ್ಚಿ ಗೆ ಇತ್ತು ಎಂದರೆ ಆಧಾರ್ ಕಾರ್ಡ್ , ಪ್ಯಾನ್ ಕಾರ್ಡ್ ಇದೆ. ಸಾಕ್ಷಿ ಮುಂದುವರೆದು ಪ್ಯಾನ್ ಕಾರ್ಡ್ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ.

4. ಅಪಘಾತವಾದ ದಿನ ನನ್ನ ಗಂಡ ಹೊರಗೆ ಹೋಗಿಬರುತ್ತೇನೆ ಎಂದು ಹೋಗಿದ್ದರು. ಯಾವ ದಿನಾಂಕದಂದು ಎಂದರೆ ದಿನಾಂಕ 15-06-2024 ಎಂದು ಉತ್ತರಿಸುತ್ತಾರೆ. ಆ ದಿನ ನಿಮ್ಮ ಗಂಡ ಸ್ವಂತ ಕಾರ್ ತೆಗೆದುಕೊಂಡು ಹೋಗಿದ್ದರಾ ಅಥವಾ ಕಚೇರಿಯ ಕಾರ್ ತೆಗೆದುಕೊಂಡು ಹೋಗಿದ್ದರಾ ಎಂದರೆ ಅವರು ಹೇಳಿರುವುದಿಲ್ಲ ಹೊರಗೆ ಹೋಗಿಬರುತ್ತೆನೆ ಎಂದು ಹೇಳಿ ಹೋಗಿರುತ್ತಾರೆ. ಅಪಘಾತವಾದ ನಂತರ ನಮಗೆ ಫೋನ್ ಬಂದಿರುತ್ತದೆ. ಅಪಘಾತವಾದ ವಿಷಯವನ್ನು ಮಲ್ಲಿಕಾರ್ಜುನ ತಿಳಿಸಿದರು. ಅಪಘಾತ ಯಾವ ರೀತಿ ಆಯಿತು ಎಂದರೆ ಲಾರಿಯವರು ಹಿಂದಕ್ಕೆ ತೆಗೆದುಕೊಂಡು ಒಮ್ಮೆಲೇ ಬ್ರೇಕ್ ಹಾಕಿದ್ದರಿಂದ ಕಾರ್ ಹೋಗಿ ಡಿಕ್ಕಿಪಡಿಸಿರುತ್ತದೆ ಎಂದು ಉತ್ತರಿಸುತ್ತಾರೆ. ಅಪಘಾತವು ಕಾರ್ ಚಾಲಕನ ತಪ್ಪಿನಿಂದ ಆಗಿಲ್ಲ ಲಾರಿ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಇಬ್ಬರ ತಪ್ಪಿನಿಂದ ಆಗಿದೆ ಎಂದು ಉತ್ತರಿಸುತ್ತಾರೆ. ಲಾರಿ ಚಾಲಕ ಒಮ್ಮೆಲೇ ಬ್ರೆ;ಕ್ ಹಾಕಿದ್ದರಿಂದ ಕಾರ್ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಇಬ್ಬರ ತಪ್ಪಿನಿಂದ ಅಪಘಾತ ಆಗಿದೆ ಎಂದು ಉತ್ತರಿಸುತ್ತಾರೆ. ಕಾರ್ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲದಿದ್ದರೂ ಸಹ ಅವರ ಮೇಲೆ ಸುಳ್ಳು ಕೇಸ್ ಮಾಡಿದ್ದೀರಿ ಎಂದರೆ ಸರಿಯಲ್ಲ. ಕಾರ್ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲದಿದ್ದರೂ ಅವರ ಮೇಲೆ ಸುಳ್ಳು ಕೇಸ್ ದಾಖಲೆ ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಪರಿಹಾರ ಕೇಳಲು ಯಾವುದೇ ಆಧಾರ ಇಲ್ಲದಿದ್ದರೂ ಸಹ ಅಂದಾಜಿನ ಮೇಲೆ

ಪರಿಹಾರ ಕೇಳಿದ್ದೀರಿ ಎಂದರೆ ಸರಿಯಲ್ಲ. ಕಾರಿನ ಚಾಲಕನ ಮೇಲೆ ದಾಖಲೆಗಳನ್ನು ಸೃಷ್ಠಿ ಮಾಡಿ ಸುಳ್ಳು ಕೇಸನ್ನು ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಗಂಡನ ಆದಾಯದಿಂದಲೇ ಮನೆ ನಡೆಯುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಾನು ಯಾವುದೇ ಕೆಲಸ ಮಾಡುವುದಿಲ್ಲ.

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀಮತಿ ಎ.ಎಸ್.ಡಿ. ವಕೀಲರಿಂದ**

1. ಅಪಘಾತವು ರಾತ್ರಿ 9 ರಿಂದ 9-30 ಗಂಟೆಗೆ ಆಗಿರುತ್ತದೆ. ಲಾರಿ ಮತ್ತು ಕಾರ್ ಎರಡೂ ಡಿಕ್ಕಿಯಾಗಿರುತ್ತದೆ. ಲಾರಿ ನಂಬರ್ ನೆನಪಿಲ್ಲ. ಆ ದಿನ ಲಾರಿ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಆಗಿದೆ ಎಂದು ಉತ್ತರಿಸುತ್ತಾರೆ. ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿಲ್ಲ ಕಾರ್ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಇಬ್ಬರ ತಪ್ಪಿ ನಿಂದ ಅಪಘಾತ ಆಗಿದೆ ಎಂದು ಉತ್ತರಿಸುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ